# ಇರುವುದೆಲ್ಲವ ಬಿಟ್ಟು...

■ ಗೀತಾ ಬಿ.ಯು.

## ಮನೆ ಬಿಟ್ಟು ಹೋಗಲು ನಿರ್ಧಾರ

'ನಾನು...' ನಾನು ಮಾತು ಶುರು ಮಾಡುವ ವೇಳೆಗೆ ಅವರು ಹೇಳಬೇಕಾದ್ದು ಹೇಳಿಯಾಗಿದ್ದರಿಂದ ಡಿಸ್‌ಕನೆಕ್ಟ್ ಮಾಡಿಯಾಗಿತ್ತು.

ಯಾರದ್ದು ಫೋನ್ ಅಂತ ದೊಡ್ಡಮ್ಮೋರು ಕೇಳ್ತಾ ಇದ್ದಾರೆ... ನಿಂಗಿ ಎದುರು ಬಂದಳು.

'ಬಂದೆ..' ನಿಧಾನವಾಗಿ ಅಡಿಗೆ ಮನೆಯತ್ತ ನಡೆದೆ.

ಅತ್ತೆ ಅಜ್ಜಿ ಇಬ್ಬರೂ ಅಡಿಗೆ ಮನೆಯಲ್ಲಿ ಇದ್ದ ಡೈನಿಂಗ್ ಟೇಬಲ್ ಬಳಿ ಕುಳಿತು. ನಾಡಿದ್ದಿನ ಹೋಮಕ್ಕೆ ಅಡಿಗೆ ಏನು ಮಾಡಿಸುವ ಬಗ್ಗೆ ಚರ್ಚೆಯಲ್ಲಿದ್ದರು...

'ಅಡಿಗೆ ಎಲ್ಲಾ ಮಾಮೂಲು.. ಮಕ್ಕಳಿಗೆ ಸೋಹನ್ ಪಪ್ಡಿ ಜಹಂಗೀರ್ ಇಷ್ಟ.. ಅದು ಮಾಡಿಸಲೇ ಬೇಕು.. ಒಬ್ಬಟ್ಟು ಆಂಬೊಡೆ ಮಾಡಿಸಬೇಕು... ಮಕ್ಕಳಿಗೆ ಇಷ್ಟವಾಗುವ ಸಿಹಿ ಅವರಿಗೆಲ್ಲಾ ಸರಿ ಹೋಗಲ್ಲ...'

'ನಾಡಿದ್ದು ಹೋಮಕ್ಕೆ ಮುಖ್ಯಮಂತ್ರಿಗಳನ್ನ ಕರ್ಕೊಂಡು ಬರ್ತಾರಂತೆ ಇವ್ರು.. ನಿಮ್ಗೆ ಹೇಳೋಕ್ಕೆ ಹೇಳಿದ್ರು...' ಇಬ್ಬರ ಮುಖ ಇಷ್ಟಗಲ ಅರಳಿತು..

'ಓ.. ಬರ್ಲಿ ಬರ್ಲಿ... ಭಟ್ಟರಿಗೆ ಫೋನ್ ಮಾಡು ಲಕ್ಷ್ಮೀ... ಬಾಳೆಲೆ ಹಾಕಿ ಅದರ ಮೇಲೆ ಬೆಳ್ಳಿಯದರ ಹಾಗೆ ಕಾಣುತ್ತಲ್ಲ.. ಆ ತರಹದ ತಟ್ಟೆಗಳನ್ನು ತರೋಕೆ

